# 'ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ'ಯಿಂದ




**ನಾ**ವು ಮಾಡಬಹುದಾದ ಕೊನೆಯ ವರ್ಗೀಕರಣವೇ ಬ್ರಹ್ಮ. ಅದಕ್ಕೆ ಬೇರೆ ಗುಣವೇ ಇಲ್ಲ. ಅದು ಸಚ್ಚಿದಾನಂದ. **ಸತ್** ಅಥವಾ ಅಸ್ತಿತ್ವವೇ ಮಾನವ ಮಾಡಬಹುದಾದ ಕೊನೆಯ ವರ್ಗೀಕರಣ. **ಚಿತ್** ಅಥವಾ ಜ್ಞಾನವೆಂದರೆ ಈಗ ನಮ್ಮಲ್ಲಿರುವ ಜ್ಞಾನವಲ್ಲ, ಅದರ ಸಾರ. ಪ್ರಾಣಿವರ್ಗದಲ್ಲಿ ಮತ್ತು ಮಾನವಕೋಟಿಯಲ್ಲಿ ಕ್ರಮೇಣ ಅದು ವಿಕಾಸವಾಗುತ್ತಿರುವುದು. ಇಲ್ಲಿ ಜ್ಞಾನದ ಸಾರವೆಂದರೆ, ಪ್ರಜ್ಞೆಗೆ ಯಾವುದು ಅತೀತವಾಗಿದೆಯೋ ಅದು. ಎಲ್ಲ ವಸ್ತುಗಳ ಪರಮ ಐಕ್ಯತೆ ಎಂದು ನಾವು ಯಾವುದನ್ನು ಕರೆಯುವೆವೋ ಅದೇ ಚಿತ್. **ಆನಂದ** ಎಂದರೆ ಪ್ರೇಮ.

ಬ್ರಹ್ಮನ ಸತ್‌ದೃಷ್ಟಿಯಿಂದ ಜ್ಞಾನಿಗೂ ಭಕ್ತನಿಗೂ ಯಾವ ಭಿನ್ನತೆಯೂ ಇಲ್ಲ. ಆದರೆ ಚಿತ್ ಭಾಗವನ್ನು ಜ್ಞಾನಿ ಹೆಚ್ಚು ಲಕ್ಷಿಸುವನು. ಭಕ್ತ ಆನಂದದ ಭಾವವನ್ನು ಲಕ್ಷಿಸುವನು. ಚಿತ್ ಅನ್ನು ಸಾಕ್ಷಾತ್ಕರಿಸಿಕೊಂಡರೆ, ಆನಂದವನ್ನು ಸಾಕ್ಷಾತ್ಕರಿಸಿಕೊಂಡಂತೆಯೇ. ಏಕೆಂದರೆ ಯಾವುದು ಚಿತ್ ಆಗಿದೆಯೋ ಅದೇ ಆನಂದ.

ಕೆಲವು ವೇಳೆ ಒಂದು ವಸ್ತುವಿನ ಮೂಲಕ ಇನ್ನೊಂದು ವಸ್ತುವನ್ನು ವಿವರಿಸುವೆವು. ನಾವು ಸಚ್ಚಿದಾನಂದ ಎಂದು ಹೇಳಿದಾಗ, ವಿವರಣೆಗೆ ಅತೀತವಾದ ವಸ್ತುವಿನ ಪಾರವನ್ನು ಹೇಳುತ್ತಿರುವೆವು. ನಾವು ಅದನ್ನು (ಬ್ರಹ್ಮವನ್ನು) ಇದೆ ಎಂತಲೂ ಹೇಳಲಾಗುವುದಿಲ್ಲ. ಏಕೆಂದರೆ ಆ ಭಾವನೆ ಕೂಡ ಸಾಪೇಕ್ಷವಾದುದು. ಯಾವ ಚಿಂತನೆಯಾಗಲಿ, ಕಲ್ಪನೆಯಾಗಲಿ ಬ್ರಹ್ಮವನ್ನು ವಿವರಿಸಲಾಗದು. ಕೇವಲ 'ನೇತಿ, ನೇತಿ' ಎಂದು ಮಾತ್ರ ಹೇಳಬಹುದು. ಅದನ್ನು ಕುರಿತು ಚಿಂತಿಸಿದರೂ ಅದನ್ನು ಯಾವುದೋ ಒಂದು ಮಿತಿಗೆ ತಂದಂತೆ ಆಗುವುದು. ಆಗ ಅದು ನಮಗೆ ಸಿಕ್ಕದೇ ಹೋಗುವುದು.

ವೇದಾಂತದ ದೇವರೇ ಬ್ರಹ್ಮ. ಅವನಿಂದ ಹೊರಗೆ ಯಾವುದೂ ಇಲ್ಲ. ಎಲ್ಲವೂ ಅವನೇ. ಅವನು ಪ್ರಪಂಚದಲ್ಲಿರುವನು. ಅವನೇ ಪ್ರಪಂಚವೂ ಆಗಿರುವನು. "ನೀನೇ ಸ್ತ್ರೀ, ನೀನೇ ಪುರುಷ, ನೀನೇ ಯೌವನದ ಮದದಲ್ಲಿ ಸಂಚರಿಸುತ್ತಿರುವ ಯುವಕ ಮತ್ತು ಇಳಿವಯಸ್ಸಿನಲ್ಲಿ ನಡನಡುಗುತ್ತ ನಡೆಯುತ್ತಿರುವ ವೃದ್ಧ!"

ಈ ವಿಶ್ವವೆಲ್ಲ ಬ್ರಹ್ಮನಲ್ಲಿಯೇ ಇತ್ತು. ಅವನಿಂದ ಈಗ ಅದು ಹೊರಬಂದಂತೆ ಇದೆ. ಪುನಃ ಅಲ್ಲಿಗೇ ಹೋಗಲು ಪ್ರಯತ್ನಿಸುತ್ತಿದೆ. ವಿದ್ಯುಜ್ಜನಕದಿಂದ ಬಂದ ವಿದ್ಯುಚ್ಛಕ್ತಿ ಹೊರಗೆ ಸಂಚರಿಸಿ, ಪುನಃ ಬಂದ ಎಡೆಗೇ ಹೋಗುವಂತೆ ಇದೆ ಅದು. ಬ್ರಹ್ಮನಿಂದ ಹೊರಬಂದು, ಸಸ್ಯ ಪ್ರಾಣಿಗಳ ಮೂಲಕ ಸಾಗಿ ಕೊನೆಗೆ ಮನುಷ್ಯನ ಸ್ಥಿತಿಗೆ ಬಂದಿದೆ. ಬ್ರಹ್ಮನಿಗೆ ಸಮೀಪದಲ್ಲಿರುವುದು ಮಾನವನೇ. ನಾವು ಎಲ್ಲಿಂದ ಬಂದೆವೋ ಅಂತಹ ಬ್ರಹ್ಮನ ಬಳಿಗೆ ಹಿಂತಿರುಗಿ ಹೋಗುವುದೇ ಈ ಜೀವನದ ಮಹಾನ್ ಹೋರಾಟ.

ನೀನು ಕೂಡ ಆ ಅವಿಭಕ್ತನಾದ ಬ್ರಹ್ಮವೇ. ನೀನು ನಿಜ ವಾಗಿಯೂ ಅದು ಎಂದು ಭಾವಿಸಿದ ಆ ಕ್ಷಣವೇ ನೀನು ಅದನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲೆ. ನಮಗೆ ಅದು ಸಾಧ್ಯವಾಗದೇ ಇರುವುದರಿಂದಲೇ ನಾವು ಅಜ್ಞಾನದಲ್ಲಿರುವುದು. ಈ ಭ್ರಾಂತಿಯ ದಂಡಕಾರಣ್ಯದಲ್ಲಿ ಪುನಃ ಪುನಃ ಸಿಕ್ಕಿ ದುಃಖದುರಂತಗಳಿಂದ ಚೆನ್ನಾಗಿ ಪೆಟ್ಟು ಬಿದ್ದಾದ ಮೇಲೆ ಆತ್ಮವು ಸ್ವಾಭಾವಿಕವಾಗಿ ಸ್ವಸ್ವರೂಪವನ್ನು ಅರಿಯಲು ಅಂತರ್ಮುಖವಾಗುವುದು. ಈ ಸಚ್ಚಿದಾನಂದವನ್ನು ಪಡೆಯಬೇಕೆಂಬ ಆಸೆ ನಮ್ಮಲ್ಲಿರುವುದರಿಂದಲೇ ಪ್ರಪಂಚದ ಪೆಟ್ಟನ್ನು ಪುನಃ ಪುನಃ ತಿಂದಾದಮೇಲೆ ತನ್ನಾತ್ಮನನ್ನು ಕುರಿತು ಅಂತರ್ಮುಖಿಯಾಗುವುದು. ಎಲ್ಲರಿಗೂ ಇಂತಹ ಕಾಲ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ. ಕೆಲವರಿಗೆ ಈ ಜನ್ಮದಲ್ಲಿಯೇ ಅದು ಪ್ರಾಪ್ತವಾಗಬಹುದು. ಮತ್ತೆ ಕೆಲವರಿಗೆ ಸಾವಿರಾರು ಜನ್ಮಗಳಾದ ಮೇಲೆ ಪ್ರಾಪ್ತವಾಗಬಹುದು.

ಬ್ರಹ್ಮ ಒಂದು. ಆದರೂ ವ್ಯಾವಹಾರಿಕ ದೃಷ್ಟಿಯಿಂದ ನೋಡಿದಾಗ ಬಹುವಾಗಿರುವಂತೆ ಕಾಣುತ್ತಿರುವುದು. ನಾಮರೂಪ ಗಳೇ ಈ ಸಾಪೇಕ್ಷಕ್ಕೆ ಮೂಲ. ಒಂದು ಮಡಕೆಯ ನಾಮರೂಪಗಳನ್ನು ಕಳೆದರೆ, ನಿಮಗೆ ಸಿಕ್ಕುವುದೇನು? ಅದರ ಸಾರವಾದ ಮಣ್ಣು ಮಾತ್ರ. ಅದರಂತೆಯೇ ಭ್ರಾಂತಿಯಿಂದ ನೀನು ಮಡಕೆ ಕುಡಿಕೆ, ಮನೆ ಮಠ ಮುಂತಾದವುಗಳನ್ನು ನೋಡುತ್ತಿರುವೆ. ಈ ವ್ಯಾವಹಾರಿಕ ಜಗತ್ತು ಅಜ್ಞಾನದ ಮೇಲೆ ನಿಂತಿದೆ. ಅದು ನಿಜವಾಗಿಯೂ ಅಸ್ತಿತ್ವದಲ್ಲಿ ಇಲ್ಲ. ನಾಮರೂಪಗಳ ಅಜ್ಞಾನದಿಂದ ಕಲ್ಪಿತವಾದ ಈ ಪ್ರಪಂಚದಲ್ಲಿ ಮಾತ್ರ ಹೆಂಡತಿ, ಮಕ್ಕಳು – ಇವನ್ನು ನೋಡುವುದು. ಈ ಅಜ್ಞಾನ ಮಾಯವಾದೊಡನೆಯೇ ಸದಾಕಾಲದಲ್ಲಿಯೂ ಇರುವ ಬ್ರಹ್ಮ ಸಾಕ್ಷಾತ್ಕಾರವಾಗುವುದು.


ಯಾರು ಸ್ಪರ್ಶಾತೀತನೋ, ಆಕಾಶಾತೀತನೋ, ರುಚಿಗೆ ಅತೀತನೋ, ಯಾರು ಅವಿಕಾರಿಯೋ, ಅನಂತನೋ, ಪ್ರಜ್ಞೆಗೂ ಯಾರು ಅತೀತನೋ ಅವಿನಾಶಿಯೋ ಅವನನ್ನು ಅರಿತುಕೊಂಡರೆ ಮಾತ್ರ ನಾವು ಮೃತ್ಯುವಿನಿಂದ ಪಾರಾಗುವೆವು.

# ವಿಜ್ಞಾನ ಬೆಳೆದು ಬಂದ ರೋಮಾಂಚಕ ಕಥೆ

ಡಾ.ಚಿದಾನಂದ ಗೌಡ

(*ಹಿಂದಿನ ಸಂಚಿಕೆಯಿಂದ*)

### ೫. ನ್ಯೂಟನ್ ಮತ್ತು ಗುರುತ್ವಾಕರ್ಷಣ ಶಕ್ತಿ




**ಶ**ರತ್ಕಾಲದ ಒಂದು ದಿನ ೨೩ ರ ಹರೆಯದ ನ್ಯೂಟನ್ ತನ್ನ ತಾಯಿಯ ತೋಟದಲ್ಲಿ ಸೇಬಿನ ಮರದ ಕೆಳಗೆ, ಹಸಿರುಹುಲ್ಲಿನ ಹಾಸಿಗೆಯ ಮೇಲೆ ಮಲಗಿ ಯೋಚನಾಮಗ್ನನಾಗಿದ್ದ. ಆಗ ಇದ್ದಕ್ಕಿದ್ದಂತೆ, ಮಾಗಿದ ಸೇಬುಹಣ್ಣೊಂದು ಮರದಿಂದ ತೊಟ್ಟು ಕಳಚಿ ಅವನ ಮುಂದೆ ಬಿತ್ತು. ಹಿಂದೆ ಅಸಂಖ್ಯ ಜನರ ಮುಂದೆ ಸೇಬು ಅಥವಾ ಇತರ ಹಣ್ಣುಗಳು ಹೀಗೆಯೇ ಬಿದ್ದಿರಬಹುದು. ಆದರೆ ಅವರೆಲ್ಲಾ ಬಿದ್ದ ಹಣ್ಣನ್ನು ಹೆಕ್ಕಿ ತಿನ್ನುವ ಯೋಚನೆ ಮಾಡಿರಬಹುದಲ್ಲದೆ, ಅದು ಏಕೆ ಕೆಳಗೆ ಬಿತ್ತೆಂದು ಯೋಚಿಸಲಾಗಲಿ, ಪ್ರಶ್ನಿಸಲಾಗಲಿ ಹೋಗಿರಲಿಕ್ಕಿಲ್ಲ. ಆದರೆ ನ್ಯೂಟನ್ ಎಲ್ಲರಂತಲ್ಲ.


ಸೇಬು ಏಕೆ ಕೆಳಗೆ ಬಿತ್ತು ಎಂದು ಅವನು ತನ್ನನ್ನು ತಾನೇ ಪ್ರಶ್ನಿಸಿಕೊಂಡ. ಹಣ್ಣು ಮಾಗಿತ್ತು, ಹಾಗಾಗಿ ದುರ್ಬಲವಾದ ತೊಟ್ಟು ಕಳಚಿ ಅದು ಕೆಳಗೆ ಬಿತ್ತು ಎಂಬ ಉತ್ತರವನ್ನು ಅವನ ಮನಸ್ಸು ಕೊಟ್ಟಿತು. ಆದರೆ ಈ ಉತ್ತರದಿಂದ ಅವನು ತೃಪ್ತನಾಗಲಿಲ್ಲ; ಅದು ಕೆಳಕ್ಕೆ ಬೀಳುವ ಬದಲು ಮೇಲಕ್ಕೆ ಅಥವಾ ಅಡ್ಡಕ್ಕೆ ಏಕೆ ಹೋಗಲಿಲ್ಲ ಅಥವಾ ಚಂದ್ರನತ್ತ ಏಕೆ ಸಾಗಲಿಲ್ಲ ಎಂದು ಅವನು ಮರುಪ್ರಶ್ನೆ ಹಾಕಿಕೊಂಡ. ಭಾರವಾದ ಎಲ್ಲ ವಸ್ತುಗಳೂ ಭೂಮಿಗೆ ಬೀಳುತ್ತವೆ, ನಿಜ; ಆದರೆ ಅವು ಏಕೆ ತಾನೆ ಬೀಳಬೇಕು? ಏಕೆಂದರೆ ಅವು ಭಾರವಾಗಿವೆ. ಆದರೆ ಇದು ಸರಿಯಾದ ಉತ್ತರವಲ್ಲ ಎಂದು ಅವನಿಗೆ ಅನ್ನಿಸಿತು. ಹಾಗಾದರೆ ಭಾರ ಮತ್ತು ಹಗುರಗಳ ಅರ್ಥವೇನು? ಸಾಮಾನ್ಯ ಜನರಾಗಿದ್ದರೆ, ಪ್ರಶ್ನೆಹಾಕುತ್ತಾ ಏಕೆ ತಲೆಕೆಡಿಸಿಕೊಳ್ಳಬೇಕೆಂದು ಸುಮ್ಮನಾಗುತ್ತಿದ್ದರು. ಆದರೆ ನ್ಯೂಟನ್ ಹಾಗಲ್ಲ. ಪ್ರಶ್ನೋತ್ತರಗಳ ಸರಪಣಿಯನ್ನು ಹೀಗೆ ಮುಂದುವರಿಸುತ್ತ ಹೋದ ಅವನು ಹಣ್ಣು ಕೆಳಗೆ ಬಿದ್ದುದರ ಕಾರಣವನ್ನು ಈ ರೀತಿ ಅರಿತ: ಪ್ರತಿಯೊಂದು ವಸ್ತುವೂ ತನ್ನತ್ತ ಇತರ ಎಲ್ಲಾ ವಸ್ತುಗಳನ್ನೂ ಆಕರ್ಷಿಸುತ್ತದೆ. ಹೆಚ್ಚು ದ್ರವ್ಯರಾಶಿಯನ್ನು ಹೊಂದಿರುವ ವಸ್ತು ಹೆಚ್ಚು ಬಲಯುತವಾಗಿ ಆಕರ್ಷಿಸುತ್ತದೆ; ವಸ್ತು ಹತ್ತಿರದಲ್ಲಿದ್ದರೆ ಅದು ಹೆಚ್ಚು ಬಲಯುತವಾಗಿ ಆಕರ್ಷಿಸುತ್ತದೆ; ಇತರ ವಸ್ತುಗಳನ್ನು ಹೆಚ್ಚು ಬಲಯುತವಾಗಿ ಆಕರ್ಷಿಸುವ ವಸ್ತುವು ಹೆಚ್ಚು ಭಾರವಾಗಿರುತ್ತದೆ; ಭೂಮಿಯು ಸೇಬಿಗಿಂತ ಕೋಟಿಗಟ್ಟಲೆ ಹೆಚ್ಚು ಭಾರವಾಗಿರುವುದರಿಂದ, ಸೇಬು ಭೂಮಿಯನ್ನು ಆಕರ್ಷಿಸುವುದಕ್ಕಿಂತಲೂ ಕೋಟಿಗಟ್ಟಲೆ ಹೆಚ್ಚು ಬಲದಿಂದ ಭೂಮಿಯು ಸೇಬನ್ನು ಆಕರ್ಷಿಸುತ್ತದೆ; ಭೂಮಿಯು ತನ್ನ ಮೇಲಿರುವ ಅಥವಾ ತನ್ನ ಬಳಿಯಿರುವ ವಸ್ತುಗಳಿಗಿಂತ ಕೋಟಿಗಟ್ಟಲೆ ಹೆಚ್ಚು ಭಾರವಾಗಿರುವುದರಿಂದ ಅದು ಅವುಗಳನ್ನೆಲ್ಲಾ ತನ್ನತ್ತ ಆಕರ್ಷಿಸುತ್ತದೆ; ಈ ಕಾರಣಕ್ಕಾಗಿ ವಸ್ತುಗಳು ಮೇಲಿನಿಂದ ಕೆಳಗೆ ಚಲಿಸುತ್ತ ಭೂಮಿಯ ಮೇಲೆ ಬೀಳುತ್ತವೆ. ಒಂದು ವಸ್ತುವು ಇತರ ಎಲ್ಲಾ ವಸ್ತುಗಳನ್ನೂ ತನ್ನತ್ತ ಆಕರ್ಷಿಸುವುದು ನಮಗೆ ಗೊತ್ತಿದೆ; ಆದರೆ ಆಕರ್ಷಿಸುವ ಕಾರಣ ಮಾತ್ರ ನಮಗೆ ತಿಳಿದಿಲ್ಲ; ಆದರೆ ಈ ಆಕರ್ಷಕ ಶಕ್ತಿಗೆ ಒಂದು ಹೆಸರು ಕೊಡಲು ನಮಗೆ ಸಾಧ್ಯವಿದೆ; ಆ ಹೆಸರೇ 'ಗುರುತ್ವಾಕರ್ಷಣ ಶಕ್ತಿ'. ಈ ಗುರುತ್ವಾಕರ್ಷಣ ಶಕ್ತಿಯ ಕಾರಣದಿಂದಾಗಿ ಸೇಬು ಕೆಳಗೆ ಬೀಳುತ್ತದೆ, ವಸ್ತುಗಳು ಭಾರವನ್ನು ಹೊಂದಿರುತ್ತವೆ, ಆಯಾ ವಸ್ತುಗಳು ಆಯಾ ಸ್ಥಾನದಲ್ಲಿರುತ್ತವೆ. ಚಂದ್ರ ಭೂಮಿಯನ್ನು ಹಾಗೂ ಭೂಮಿ ಸೂರ್ಯನನ್ನು ಸುತ್ತುತ್ತಿರುತ್ತದೆ. ಪ್ರಶ್ನಿಸುವುದು, ಉತ್ತರಿಸುವುದು, ಮತ್ತೆ ಪ್ರಶ್ನಿಸುವುದು, ಮತ್ತೆ ಉತ್ತರಿಸುವುದು,...ಇದನ್ನು ಸರಪಣಿಯಂತೆ ತರ್ಕಬದ್ಧವಾಗಿ ಮುಂದುವರಿಸುವುದು ಸತ್ಯವನ್ನು ಅರಿಯುವ ಒಂದು ವಿಧಾನ. ಹೀಗೆ ಸೇಬಿನ ಹಣ್ಣು ಮೇಲಿಂದ ತನ್ನ ಬಳಿ ಬಿದ್ದ ಬಳಿಕ, ಪ್ರಶ್ನೋತ್ತರಗಳ ಸರಪಣಿಯನ್ನು ಮುಂದುವರಿಸಿ, ಸರ್ ಐಸಾಕ್ ನ್ಯೂಟನ್ (೧೬೪೨–೧೭೨೭) ನಿಸರ್ಗದ ನಿತ್ಯಸತ್ಯವೊಂದನ್ನು ಅರಿತುಕೊಂಡನು.

### ೬. ಗ್ರಹಾಮ್ ಬೆಲ್ ಮತ್ತು ತಂತುಸಂವಹನ

ಗ್ರಹಾಮ್ ಬೆಲ್ ವಾಕ್–ಚಿಕಿತ್ಸಕ ಮತ್ತು ಹವ್ಯಾಸಿ ವಿಜ್ಞಾನಿಯಾಗಿದ್ದ. ಅವನ ತಾಯಿ ಮತ್ತು ಪತ್ನಿ ಕಿವುಡುತನದಿಂದ ಬಳಲುತ್ತಿದ್ದುದರಿಂದ ಕಿವುಡರ ಸಂವಹನಕ್ಕೆ ಸಹಾಯಕವಾದ ಸಾಧನವೊಂದರ ಆವಿಷ್ಕಾರವು ಅವನ ಜೀವನದ ಮುಖ್ಯ ಗುರಿಯಾಗಿತ್ತು. ವಿದ್ಯುತ್ ತಂತಿಯ ಮೂಲಕ ಧ್ವನಿಯನ್ನು ಕಳಿಸಲು ಐದು ವರ್ಷಗಳ ಕಾಲ ಸತತವಾಗಿ ಪರಿಶ್ರಮಿಸಿ, ಸೋತು ಹೋದ. ಕಡೆಗೊಮ್ಮೆ ವಾಷಿಂಗ್‌ಟನ್‌ನಲ್ಲಿ ವಿದ್ಯುಚ್ಛಕ್ತಿಯ ಮೂಲ ಪರಿಶೋಧಕನಾದ ಜೋಸೆಫ್ ಹೆನ್ರಿಯನ್ನು ಭೇಟಿಯಾದಾಗ, ಈ ನಿರಾಶಾದಾಯಕ ಸಂಶೋಧನೆಯನ್ನು ಕೈಬಿಡಲೇ ಎಂದು


ಕೇಳಿದ. ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಜ್ಞಾನವನ್ನು ಸಂಪಾದಿಸಿಕೊಂಡು ಸಂಶೋಧನೆಯನ್ನು ಮುಂದುವರಿಸುವಂತೆ ಹೆನ್ರಿ ಸಲಹೆ ಕೊಟ್ಟ.

ಅದರಂತೆ, ಜ್ಞಾನಾರ್ಜನೆ ಮತ್ತು ಸಂಶೋಧನೆಗಳನ್ನು ಮುಂದುವರಿಸಿದ ಬೆಲ್, ವಿದ್ಯುತ್ ತಂತಿಯ ಮೂಲಕ ಮನುಷ್ಯನ ಮಾತನ್ನು ದೂರಕ್ಕೆ ಕಳಿಸಲು ಸಾಧ್ಯವಾಗಿಸುವ ಟೆಲಿಫೋನನ್ನು ಆವಿಷ್ಕರಿಸಿದ. ೧೮೭೬ರ ಫೆಬ್ರವರಿ ೧೪ ರಂದು ಬೆಳಗ್ಗೆ ಅದರ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಿದ. ಇದೇ ಆವಿಷ್ಕಾರದಲ್ಲಿ ನಿರತನಾಗಿದ್ದ ಇನ್ನೊಬ್ಬ ವಿಜ್ಞಾನಿ ಎಲಿಶಾ ಗ್ರೇ ಅದೇ ದಿನ ಮಧ್ಯಾಹ್ನ ತನ್ನ ಆವಿಷ್ಕಾರ-ಸಾಧನದ ಪೇಟೆಂಟ್‌ಗಾಗಿ ಅರ್ಜಿ ಹಾಕಿದ. ಯಾರಿಗೆ ಪೇಟೆಂಟ್ ನೀಡಬೇಕೆಂಬ ಸಮಸ್ಯೆ ಕೋರ್ಟಿಗೆ ಹೋಯಿತು. ಹಲವಾರು ವರ್ಷಗಳ ವಾದ-ವಿವಾದಗಳ ಬಳಿಕ ಅಮೆರಿಕಾದ ಸರ್ವೋಚ್ಚ ನ್ಯಾಯಾಲಯ ಗ್ರಹಾಮ್ ಬೆಲ್ ಪರವಾಗಿ ತೀರ್ಪು ನೀಡಿದುದರಿಂದ ಟೆಲಿಫೋನಿಗಾಗಿ ಬೆಲ್ ಪೇಟೆಂಟನ್ನು ಪಡೆದುಕೊಂಡ.



ಅಲೆಕ್ಸಾಂಡರ್ ಗ್ರಹಾಮ್ ಬೆಲ್

ಆದರೆ ಟೆಲಿಫೋನುಗಳನ್ನು ಅಧಿಕ ಸಂಖ್ಯೆಯಲ್ಲಿ ನಿರ್ಮಿಸಿ ಜನಸಾಮಾನ್ಯರ ಬಳಕೆಗೆ ನೆರವಾಗಲು ಯಾರೂ ಮುಂದೆ ಬರಲಿಲ್ಲ. ಟೆಲಿಫೋನಿನ ಕುರಿತಾದ ಪೇಟೆಂಟ್ ಆಧಾರಿತ ತನ್ನ ಸಂಪೂರ್ಣ ಹಕ್ಕನ್ನು ಆ ಕಾಲದ ಪ್ರಸಿದ್ಧ ಟೆಲಿಗ್ರಾಫ್ ಕಂಪೆನಿಯಾದ ವೆಸ್ಟರ್ನ್ ಯೂನಿಯನ್ನಿಗೆ ಒಂದು ಲಕ್ಷ ಡಾಲರಿಗೆ ಮಾರಲು ಬೆಲ್ ಪ್ರಯತ್ನಿಸಿದ. ಬೆಲ್ ಕಂಡುಹಿಡಿದ ಟೆಲಿಫೋನಿನಲ್ಲಿ ಅನೇಕ ಕುಂದುಕೊರತೆಗಳಿರುವುದರಿಂದ ಅದನ್ನು ಸಂವಹನ ಮಾಧ್ಯಮವಾಗಿ ಬಳಸುವುದು ಅಸಾಧ್ಯ; ಹಾಗಾಗಿ ತಮ್ಮ ಟೆಲಿಗ್ರಾಫ್ ಕಂಪೆನಿಗೆ ಅದು ಯಾವುದೇ ರೀತಿಯಲ್ಲೂ ಉಪಯುಕ್ತವಾಗುವುದಿಲ್ಲ; ಅದಲ್ಲದೆ ಟೆಲಿಫೋನಿಗೆ ಭವಿಷ್ಯವೇ ಇಲ್ಲವೆಂದು ಹೇಳಿ ವೆಸ್ಟರ್ನ್ ಯೂನಿಯನ್ ಕಂಪೆನಿ ಬೆಲ್ ಕೊಟ್ಟ ಪ್ರಸ್ತಾಪವನ್ನು ತಿರಸ್ಕರಿಸಿತು. ಎದೆಗುಂದದ ಬೆಲ್ ತನ್ನದೇ ಆದ ಒಂದು ಟೆಲಿಫೋನ್ ಕಂಪೆನಿ ಸ್ಥಾಪಿಸಿದ. ಅಮೆರಿಕದ ರಾಷ್ಟ್ರಾಧ್ಯಕ್ಷರ ಅಧಿಕೃತ ನಿವಾಸವಾದ ಶ್ವೇತಭವನದಲ್ಲಿ ಬೆಲ್, ಟೆಲಿಫೋನಿನ ಕಾರ್ಯವಿಧಾನದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿದ. ಅದನ್ನು ವೀಕ್ಷಿಸಿದ ಅಧ್ಯಕ್ಷ ರುದರ್‌ಫೋರ್ಡ್ ಹೇಯ್ಸ್‌ರವರು, "ಇದೊಂದು ವಿಸ್ಮಯಕರವಾದ ಸಂಶೋಧನೆ ಎಂಬುದರಲ್ಲಿ ಏನೂ ಸಂಶಯವಿಲ್ಲ. ಆದರೆ ಟೆಲಿಫೋನ್‌ನಂತಹ ಉಪಕರಣಗಳನ್ನು ಬಳಸಲು ಯಾರೂ ಬಯಸುವುದಿಲ್ಲ" ಎಂದು ಹೇಳಿ ಬೆಲ್‌ನ ಉತ್ಸಾಹಕ್ಕೆ ತಣ್ಣೀರು ಎರಚಿದರು. ಆದರೆ ಒಂದು ವರ್ಷದ ಬಳಿಕ ಅದೇ ಶ್ವೇತಭವನದಲ್ಲಿ ಸಂವಹನಕ್ಕಾಗಿ ಒಂದು ಟೆಲಿಫೋನನ್ನು ಬೆಲ್ ಸ್ಥಾಪಿಸಿದ್ದು ಈಗ ಇತಿಹಾಸ. ಅಂದು ಬೆಲ್ ಸ್ಥಾಪಿಸಿದ ಸಣ್ಣ ಕಂಪೆನಿಯು ಬೆಳೆದು ಇಂದು ದೂರಸಂವಹನಕ್ಕೆ ವಿಶ್ವಪ್ರಸಿದ್ಧವಾದ ಎಟಿ&ಟಿ (AT &T) ಕಂಪೆನಿಯಾಗಿದೆ.



ನಿಕಲಾಸ್ ಟೆಸ್ಲಾ

## ೭. ವಿವೇಕಾನಂದ, ಟೆಸ್ಲಾ, ಐನ್‌ಸ್ಟೈನ್: ವಸ್ತು-ಶಕ್ತಿ

೧೮೯೬ ರ ಒಂದು ಮರೆಯಲಾಗದ ದಿನ, ಸ್ವಾಮಿ ವಿವೇಕಾನಂದರ ಭೇಟಿ ಆಗಿನ ಅಮೆರಿಕಾದ ಸುಪ್ರಸಿದ್ಧ ವಿಜ್ಞಾನಿಗಳಾದ ನಿಕಲಾಸ್ ಟೆಸ್ಲಾ, ಥಾಮಸ್ ಎಡಿಸನ್ ಮತ್ತು ಲಾರ್ಡ್ ಕೆಲ್ವಿನ್ ಅವರೊಡನೆ ವಿದ್ಯುತ್-ವಿಜ್ಞಾನಿ ಎಲಿಶಾ ಗ್ರೇ ಅವರ ಮನೆಯಲ್ಲಿ ನಡೆಯಿತು. ಆ ವಿಜ್ಞಾನಿಗಳನ್ನು ಉದ್ದೇಶಿಸಿ ಮಾತನಾಡಿದ ಸ್ವಾಮೀಜಿ, "ವಿಚಾರವಾದ ಮತ್ತು ಅನುಮಾನಗಳ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಧರ್ಮವು ಬರೀ ಮೂಢನಂಬಿಕೆ ಎನಿಸುತ್ತದೆ. ಅಂತಹ ಧರ್ಮ ಎಷ್ಟು ಬೇಗ ಮರೆಯಾಗುವುದೋ ಅಷ್ಟು ಒಳ್ಳೆಯದು" ಎಂದರು. ಈ ಭೇಟಿಯ ಸಮಯದಲ್ಲಿ ಹಾಜರಿದ್ದ ನಿಕಲಾಸ್ ಟೆಸ್ಲಾ ಅವರು ಎ.ಸಿ. ವಿದ್ಯುಚ್ಛಕ್ತಿ, ಪಾಲಿಫೇಸ್ ವಿದ್ಯುತ್‌ಜನಕ, ವಿದ್ಯುತ್ಕಾಂತೀಯ ತತ್ತ್ವಕ್ಕೆ ಸಂಬಂಧಪಟ್ಟ ಸಂಶೋಧನೆಗಳಿಗಾಗಿ ಹೆಸರುವಾಸಿಯಾದವರು. ಅವರು ತಮ್ಮ ಸಂಶೋಧನೆಗಳಲ್ಲಿ ಎಷ್ಟು ಮಗ್ನರಾಗಿರುತ್ತಿದ್ದರು ಎಂದರೆ, ಅವರಿಗೆ ಊಟಮಾಡಲು, ಸಂಶೋಧನಾಲಯದಿಂದ ಮನೆಗೆ ಹೋಗಲು ಸಮಯ ಸಿಗುತ್ತಿರಲಿಲ್ಲ. ಆದರೆ ಸ್ವಾಮೀಜಿಯವರ ವೇದಾಂತದ ಕುರಿತಾದ ಉಪನ್ಯಾಸಗಳಿಗೆ ಅವರು ನಿಮಿಷವೂ ತಡಮಾಡದೆ ಹಾಜರಾಗುತ್ತಿದ್ದರು. ವಿವೇಕಾನಂದರ ಉಪನ್ಯಾಸಗಳು ವೈಜ್ಞಾನಿಕವಾಗಿದೆ ಮತ್ತು ಪ್ರಸಕ್ತ ಯುಗದ ಆಶಯಗಳಿಗೆ ಹೊಂದುವಂತಿದೆ ಎಂದು ಅವರು ಹೊಗಳುತ್ತಿದ್ದರು. ನಿಕಲಾಸ್ ಟೆಸ್ಲಾ ಆಗಾಗ ತಮ್ಮ ದೇಹದ ಮೂಲಕ ಲಕ್ಷಾಂತರ ವೋಲ್ಟುಗಳ ವಿದ್ಯುಚ್ಛಕ್ತಿಯನ್ನು ಹರಿಸಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ತಮ್ಮ ಕೈಗಳ ಮೂಲಕ ಹರಿಯುವ ವಿದ್ಯುತ್ತಿನಿಂದ ದೀಪಹಚ್ಚುವುದು, ತಾಮ್ರದ ತಟ್ಟೆಗಳನ್ನು ಕರಗಿಸುವುದು, ಲೋಹದ ತಟ್ಟೆಗಳನ್ನು ಸ್ಫೋಟಿಸುವುದು ಮುಂತಾದ ಭಯ ಹುಟ್ಟಿಸುವ ಪ್ರದರ್ಶನಗಳನ್ನು ನೀಡುತ್ತಿದ್ದರು. ಆದರೆ ತಾವು ಮಾತ್ರ ಕ್ಷೇಮವಾಗಿ (ಸ್ಕಿನ್ ಪರಿಣಾಮದಿಂದಾಗಿ)